ಮಲಗಿದೆ. ಏನೇನೋ ನೆನಪು ದಾಳಿಯಿಟ್ಟು ಮನಸ್ಸು ಭಾರವಾಯ್ತು. ಅವಕ್ಕೆಲ್ಲ ಒಂದು ಹೊರ ದಾರಿ ತೋರಿಸಬೇಕಾಗಿತ್ತು. ದೇವರ ಪಟಗಳ ಹಿಂದೆ ಇಟ್ಟಿದ್ದ ಮಾಸಲು ಬಾವುಟಾನ ಎದೆಯ ಮೇಲೆ ಹರವಿಕೊಂಡೆ. ಗುಂಡಿಗೆಯ ಒಳಗೆಲ್ಲ ಬೆಚ್ಚಗಾಯಿತು.

### ಕತೆಯ ಹಿಂಭಾಗ:

ನಾಯಕರು ಅವತ್ತು ರಾತ್ರಿಯೇ ತೀರಿಕೊಂಡಿದ್ದರು. ಅವರ ಶವದ ಬಳಿ ಅವರ ಮಕ್ಕಳು, ಮೊಮ್ಮಕ್ಕಳನ್ನು ಬಿಟ್ಟರೆ ಬೇರ್‍ಯಾರೂ ಇರಲಿಲ್ಲ. ಮನೆಯಲ್ಲಿನ ಸೂತಕದ ಮೌನಕ್ಕೆ ಹೆದರಿ ನಾಯಕರ ಅಳಿಯ ಸೂರಿಬಾಬು ಟಿ.ವಿ. ಆನ್ ಮಾಡಿದ್ದ. ಒಂದು ಸುದ್ದಿ ಚಾನೆಲ್ಲಿನಲ್ಲಿ ಸರ್ಕಾರಿ ಕಚೇರಿಗೆ ಕಾಗೆ ಹೊಕ್ಕಿದ್ದರ ಬಗ್ಗೆ ವಿಚಾರವಂತರು ಜ್ಯೋತಿಷಿಗಳ ಮಧ್ಯೆ ಬಿರುಸಿನ ವಾಗ್ವಾದ ನಡೆಯುತ್ತಿತ್ತು. ಸಿನಿಮಾ ನಟಿಯೊಬ್ಬಳ ಮುರಿದು ಬಿದ್ದ ಮದುವೆಯ ಕುರಿತ ಚರ್ಚೆ ಇನ್ನೊಂದು ಚಾನೆಲ್ಲಿನಲ್ಲಿ ಕಾವೇರಿತ್ತು. ಆದರೂ ಅವೊತ್ತು ನಾಯಕರ ಅದೃಷ್ಟ ತಕ್ಕ ಮಟ್ಟಿಗೆ ಚೆನ್ನಾಗಿಯೇ ಇತ್ತು. ಟಿ.ವಿ.ಯವರಿಗೆ ನಾಯಕರ ಸಾವಿನ ವಿಚಾರವೂ ಗೊತ್ತಾಗಿತ್ತು. ಟೀವಿ ಚಾನೆಲ್ಲುಗಳ ದೊಡ್ಡ ಬ್ರೇಕಿಂಗ್ ನ್ಯೂಸ್‌ಗಳ ಅಡಿಯಲ್ಲಿ ನಾಯಕರ ಸಾವಿನ ಸುದ್ದಿ ಸಣ್ಣಗಿನ ಸಾಲಾಗಿ ಒಂದೆರಡು ನಿಮಿಷ ಹರಿದಾಡಿ ಸದ್ದಿಲ್ಲದೆ ಮಾಯವಾಯ್ತು.

ನಾಯಕರ ತಲೆ ದಿಂಬಿನ ಅಡಿಯಲ್ಲಿ ಒಂದು ದಿನಚರಿ ಪುಸ್ತಕ, ಒಂದು ಪತ್ರ, ಒಂದು ಬಟ್ಟೆಯ ಚೀಲ ಇದ್ದವು. ಚೀಲದಲ್ಲಿ ನಾಯಕರು ನಾಜೂಕಾಗಿ ಮಡಚಿಟ್ಟ ಕೆಂಪು ಹಳದಿ ಬಣ್ಣದ ಬಾವುಟವಿತ್ತು. ಪತ್ರದಲ್ಲಿ ಪುಡಿ ಸಾಲಗಳ ಉದ್ದನೆಯ ಲೆಕ್ಕವಿತ್ತು. ದಿನಚರಿಯಲ್ಲಿ ಯಾವ ಕೇಸಿಗೆ ಯಾವ ದಿನ ಕೋರ್ಟಿಗೆ ಹೋಗಬೇಕೆನ್ನುವ ವಿವರಗಳಿದ್ದವು.

## ಅಮರೇಂದ್ರ ಹೊಲ್ಲಂಬಳ್ಳಿ

ಲೇಖಕರು ಕೋಲಾರದ ಹೊಲ್ಲಂಬಳ್ಳಿಯವರು. ಪ್ರಸ್ತುತ ಬೆಂಗಳೂರಿನ ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು. ಪ್ರಕಟಿತ ಕೃತಿಗಳು: 'ವಾಲ್ ಪೇಪರ್' (ಕಥಾ ಸಂಕಲನ), 'ಮರುಮಾತು' (ವಿಮರ್ಶಾ ಲೇಖನಗಳ ಸಂಕಲನ). ಪ್ರಕಟಣೆಯ ಹಂತದಲ್ಲಿರುವ ಕೃತಿಗಳು: 'ಕಾಯ', 'ನಿರ್ವಾಣ' ಎಂಬ ಎರಡು ಕಾದಂಬರಿಗಳು ಹಾಗೂ ನಾಟಕ 'ಮಲ್ಲಿಕಾಫರ್'.

ವಿವಿಧ ಪತ್ರಿಕೆಗಳಲ್ಲಿ ಸಾಹಿತ್ಯ, ಭಾಷೆ, ಸಂಸ್ಕೃತಿಗೆ ಸಂಬಂಧಿಸಿದ ಲೇಖನಗಳು ಹಾಗೂ ಕತೆ, ಕಾದಂಬರಿ ಪ್ರಕಟವಾಗಿವೆ. ಆಕಾಶವಾಣಿಯಲ್ಲಿ ವಿಶೇಷ ಉಪನ್ಯಾಸಗಳು ಪ್ರಸಾರಗೊಂಡಿದ್ದು, ಹಲವು ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದ್ದಾರೆ.